**ದೈ**ಜು ಎಂಬ ಝೆನ್ ಸಾಧಕ ಗುರು ಬಾಸೊವನ್ನು ಭೇಟಿ ಮಾಡಿದಾಗ ಬಾಸೊ ವಿಚಾರಿಸಿದ, "ಏನನ್ನು ಹುಡುಕುತ್ತಿರುವೆ ನೀನು?"
"ಜ್ಞಾನೋದಯವನ್ನು"
"ನಿನ್ನದೇ ನಿಧಿಯ ಭಂಡಾರವಿದೆ ನಿನ್ನಲ್ಲಿ! ಮತ್ತೆ ಯಾಕೆ ಹೀಗೆ, ಹೊರಗಡೆಯೆಲ್ಲ ಹುಡುಕುತ್ತಿ?"
"ಎಲ್ಲಿದೆ ನನ್ನ ಭಂಡಾರ?"
"ನೀನು ಪ್ರಶ್ನಿಸುತ್ತ ಇದ್ದೀಯಲ್ಲ ಹೀಗೆ, ಇದೇ ನಿನ್ನ ನಿಧಿಯ ಭಂಡಾರ"
ದೈಜುವಿಗೆ ಜ್ಞಾನೋದಯವಾಯಿತು.



# ಉದಯವಾಣಿ ಸಾಪ್ತಾಹಿಕ ಸಂಪದ

ಜುಲೈ 8, 2012, ರವಿವಾರ

# ದಾರಿಯು ದೀರ್ಘ

ಜಿನೀವಾದ ವಿಜ್ಞಾನ ಸಂಶೋಧನಾಲಯದಲ್ಲಿ ದೇವಕಣ ಅಥವಾ ಹಿಗ್ಸ್ ಬೊಸೋನ್‌ಅನ್ನು ಕಂಡುಹಿಡಿಯುವುದರೊಂದಿಗೆ ಜಗತ್ತಿನ ಉಗಮದ ಮೂಲ ಹುಡುಕುವಲ್ಲಿ ಮತ್ತೊಂದು ಹೆಜ್ಜೆಯನ್ನು ಮುಂದಿರಿಸಿದಂತಾಗಿದೆ. ಆದರೆ, ಭಾರತೀಯ ಜ್ಞಾನಪರಂಪರೆಯಲ್ಲಿ ಜಗತ್ತಿನ ಸೃಷ್ಟಿಯ ಬಗ್ಗೆ ಅನೇಕ ಅನ್ವೇಷಣೆಗಳು ನಿರಂತರವಾಗಿ ನಡೆದುಕೊಂಡು ಬಂದಿವೆ. ಜಗತ್ತಿನ ಸೃಷ್ಟಿಗೆ ಪರಮಾರ್ಥವಿಲ್ಲ ಎಂಬುದು ಆರ್ಷೇಯ ದಾರ್ಶನಿಕರ ಒಂದು ಕಾಣ್ಕೆ. ಹಾಗಾಗಿ, 'ದೇವಕಣ ಅನಾವರಣ'ದಂಥ ಸಂಶೋಧನೆಗಳು ಸತ್ಯಾನ್ವೇಷಣೆಯ ದೀರ್ಘ ಹಾದಿಯ ಒಂದು ಮೈಲುಗಲ್ಲು ಮಾತ್ರ. ಸಾಗಬೇಕಾದ ದಾರಿ ಇನ್ನೂ ದೀರ್ಘವಾಗಿದೆ ಎಂಬುದು ಎಂದೆಂದಿಗೂ ತಿಳಿದುಕೊಳ್ಳಬೇಕಾದ ಸತ್ಯ.

**ಶತಾವಧಾನಿ ಡಾ| ಆರ್. ಗಣೇಶ್**

*(ಪಿ. ಕೆ. ಗೆ ಹೇಳಿದ ಸಾರಸಂಗ್ರಹ)*

**ಹು**ಟ್ಟಿದಂದಿನಿಂದಲೂ ಮನುಷ್ಯನಿಗೆ ತನ್ನ ಹುಟ್ಟು ಹೇಗಾಯಿತು, ಏಕಾಯಿತು ಎಂಬ ಪ್ರಶ್ನೆ ಇದ್ದೇ ಇದೆ. ಅದೇ ಪ್ರಶ್ನೆ ವಿಸ್ತರಿಸಿ ಜಗತ್ತಿನ ಸೃಷ್ಟಿಯ ಬಗೆಗಿನ ಕುತೂಹಲವಾಗಿ ಕಾಡಿದ್ದಿದೆ. ಕುತೂಹಲ ಮನುಷ್ಯನ ಸಹಜ ಗುಣ. ಅದನ್ನು ತಣಿಸಲು ಅವನು ಹಲವು ಬಗೆಯ ಸಂಶೋಧನೆಗಳನ್ನು ಮಾಡುತ್ತ ಬಂದಿದ್ದಾನೆ. ಇತ್ತೀಚೆಗೆ 'ದೇವಕಣ ಅಥವಾ ಹಿಗ್ಸ್ ಬೋಸೊನ್ ಅನಾವರಣ'ಕ್ಕೆ ಸಂಬಂಧಿಸಿದ ಸಂಶೋಧನೆಗೂ ಈ ಕುತೂಹಲವೇ ಮೂಲವಾಗಿದೆ. ಆದರೆ, ಇಂಥ ಸಂಶೋಧನೆಗಳು ಮನುಷ್ಯನ ಕುತೂಹಲವನ್ನು ತಣಿಸುವ ತತ್‌ಕ್ಷಣದ ಉತ್ತರಗಳಾದಾವೇ ಹೊರತು ಅವೇ ಪರಮಸತ್ಯಗಳಲ್ಲ ಎಂಬ ಅರಿವು ಬಹಳ ಮುಖ್ಯವಾದುದು. ಶ್ರೀಶಂಕರಾಚಾರ್ಯರು ಕೂಡಾ ತಮ್ಮ ಭಾಷ್ಯ ಗ್ರಂಥಗಳಲ್ಲಿ 'ಸೃಷ್ಟಿಯ ಮೂಲವನ್ನು ಅರಿತುಕೊಳ್ಳುವುದು ಕಷ್ಟ. ಏಕೆಂದರೆ, ಅದರೊಳಗೆ ಯಾವ ಪರಮಾರ್ಥವಿಲ್ಲ. ಈ ನಿಟ್ಟಿನ ಅನ್ವೇಷಣೆಗಳು ಮನುಷ್ಯನ ಕುತೂಹಲವನ್ನು ತಣಿಸಿಕೊಳ್ಳಲಷ್ಟೇ ಸಹಕಾರಿಯಾಗಬಹುದು' ಎಂದು ಮಾರ್ಮಿಕವಾಗಿ ಉಲ್ಲೇಖಿಸಿದ್ದಾರೆ.

ಭಾರತೀಯ ಜ್ಞಾನ ಪರಂಪರೆಯಲ್ಲಿ ಜಗತ್ತಿನ ಸೃಷ್ಟಿಯ ಬಗ್ಗೆ ಬೇರೆ ಬೇರೆ ರೀತಿಯ ವಿವರಣೆಗಳಿವೆ. ಋಗ್ವೇದದ **ಹಿರಣ್ಯಗರ್ಭ ಸೂಕ್ತ**ದಲ್ಲಿ ಬಂಗಾರದ ಮೊಟ್ಟೆಯೊಂದು ಮೊತ್ತಮೊದಲು ಆವಿರ್ಭವಿಸಿತು ಎಂಬ ಉಲ್ಲೇಖವಿದೆ. ಆ ಬಂಗಾರದ ಮೊಟ್ಟೆಯು ಒಡೆದು ಮೇಲ್ಭಾಗ ಆಕಾಶವಾಗಿಯೂ ಕೆಳಭಾಗ ಭೂಮಿಯಾಗಿಯೂ ರೂಪುಗೊಂಡಿತು ಎಂದು ಹೇಳಲಾಗಿದೆ. **ವಿಶ್ವಕರ್ಮಸೂಕ್ತ**ದಲ್ಲಿ ಒಬ್ಬ ಶಿಲ್ಪಿಯು ಶಿಲ್ಪವನ್ನು ರೂಪಿಸುವಂತೆ ಪರಮಾತ್ಮನು ಈ ಜಗತ್ತನ್ನು ನಿರ್ಮಿಸಿದ ಎಂದು ಹೇಳಿದೆ. **ಪುರುಷಸೂಕ್ತ**ದಲ್ಲಿ ಪರಮಪುರುಷ ಅಥವಾ ಪರಮಾತ್ಮ



ಚಿತ್ರ : ಮಧುಸೂದನ್

ತಾನೇ ಯಜ್ಞದಲ್ಲಿ ಆಹುತಿಗೊಂಡು ಜಗತ್ತಿನ ಸೃಷ್ಟಿಗೆ ಕಾರಣನಾದ ಎಂಬ ಮಹಾರೂಪಕಾತ್ಮಕವಾದ ವಿವರಣೆಯಿದೆ. ಆ ಪರಮಾತ್ಮನ ಮನಸ್ಸಿನಿಂದ ಚಂದ್ರನೂ ಕಣ್ಣುಗಳಿಂದ ಸೂರ್ಯನೂ ಕಿವಿಗಳಿಂದ ದಿಕ್ಕುಗಳೂ ಹೊಕ್ಕಳಿನಿಂದ ಅಂತರಿಕ್ಷವೂ ಸಾಕಾರಗೊಂಡವು. ಪರಮಾತ್ಮ ಆಹುತಿಗೊಂಡ ಯಜ್ಞಕ್ಕೆ ವಸಂತ ಋತುವು ತುಪ್ಪವಾಗಿಯೂ ಗ್ರೀಷ್ಮನು ಸಮಿತ್ತು ಆಗಿಯೂ ಶರತ್ತು ಹವಿಸ್ಸು ಆಗಿಯೂ ಸಹಕರಿಸಿದವು ಇತ್ಯಾದಿ ವಿವರಗಳುಂಟು.

ಪ್ರಸಿದ್ಧವಾದ **ನಾಸದೀಯ ಸೂಕ್ತ**ವು ಸೃಷ್ಟಿಯು ಅಮೇಯವಾದುದು, ಅಚಿಂತ್ಯವಾದುದು ಎಂದು ಹೇಳುತ್ತದೆ. ಈ ಸೃಷ್ಟಿಯ ರಹಸ್ಯವನ್ನು ಸರ್ವಾಧ್ಯಕ್ಷನಾದ ಪರಮಾತ್ಮನಿಗೂ ಅರಿಯಲು ಸಾಧ್ಯವಾಗಲಿಲ್ಲವಂತೆ. ಆಗ ದೇಶ-ಕಾಲಗಳ ವಿಭಾಗ ಇರಲಿಲ್ಲ. ಇತ್ತು, ಇದೆ, ಇರಲಿದೆ ಹಾಗೂ ಅಲ್ಲಿ, ಇಲ್ಲಿ, ಎಲ್ಲಿ ಮುಂತಾದ ಕಲ್ಪನೆಗಳಿರಲಿಲ್ಲ. ಇಂಥ ಸಂಕೀರ್ಣ ಸ್ಥಿತಿಯಲ್ಲಿ ಜಗತ್ತಿನ ಮೂಲದ ರಹಸ್ಯವನ್ನು ಪರಮಾತ್ಮನಿಗೂ ತಿಳಿಯಲಾಗಲಿಲ್ಲ ಎನ್ನುವುದರ ಮೂಲಕ ಇದರ ನಿಗೂಢತೆಯನ್ನು ಇನ್ನಷ್ಟು ಗಾಢವಾಗಿಸಲಾಗಿದೆ.

ಸೃಷ್ಟಿಯ ಮೊದಲು ಬಯಕೆ ಇತ್ತು, ಆ ಬಯಕೆಯೇ ಸೃಷ್ಟಿಗೆ ಕಾರಣವಾಯಿತು ಎಂಬುದೊಂದು ವೇದೋಕ್ತಿ : *ಕಾಮಸ್ತದಗ್ರೇ ಸಮವರ್ತತಾಧಿ.*

ಬಯಕೆಗೆ ಕಾರಣವಾಗುವುದು ಮನಸ್ಸು. ಹಾಗಾಗಿ, ಮನಸ್ಸು ಎಲ್ಲದಕ್ಕೂ ಮೂಲ. ಆದುದರಿಂದಲೇ ಬಯಕೆಯನ್ನು 'ಮನಸಿಜ' ಎನ್ನುವುದೂ ಇದೆ. ಬಯಕೆಯಿಂದಲೇ ಜಗತ್ತು. ಹಾಗಾಗಿ, ಕಾಮವೇ ಈ ಜಗತ್ತಿನ ಆದಿ. ಕಾಮಕ್ಕೆ ಮನಸ್ಸು ಮೂಲ. ಮನಸ್ಸಿಗೆ ಮೂಲ ಆದಿ ಚೈತನ್ಯ. ಈ ಚೈತನ್ಯವೇ ಸ್ವಯಂಭೂ. ಇದು ವೈದಿಕ ದರ್ಶನ.

ಉಪನಿಷತ್ತುಗಳು ಕೂಡಾ ಇದೇ ಧಾಟಿಯ ವಿವರಣೆಯನ್ನು ನೀಡುತ್ತವೆ. ಪುರಾಣಗಳಲ್ಲಿ ಬರುವ ಸೃಷ್ಟಿಯ ವಿವರಣೆಯಂತೂ ನಮಗೆಲ್ಲ ಪರಿಚಿತವಾಗಿರುವಂಥಾದ್ದು.

ಶಿವ ಪುರಾಣಗಳು ಶಿವನನ್ನೇ ಸೃಷ್ಟಿಯ ಮೂಲವೆಂದು ಕರೆದರೆ ವಿಷ್ಣ್ವಾದಿ ಪುರಾಣಗಳಲ್ಲಿ ವಿಷ್ಣುವೇ ಎಲ್ಲದಕ್ಕೂ ಮೂಲ ಎಂದೂ ದೇವೀ ಪುರಾಣಗಳು ದೇವಿಯನ್ನು ಆತ್ಯಂತಿಕ ಶಕ್ತಿಯೆಂದು ಹೇಳಿವೆ. ಸೃಷ್ಟಿಯಲ್ಲಿ ಸಾತ್ತ್ವಿಕ ಸೃಷ್ಟಿ, ರಾಜಸ ಸೃಷ್ಟಿ ಮತ್ತು ತಾಮಸ ಸೃಷ್ಟಿಗಳೆಂಬ ಮೂರು ವಿಧಗಳಿವೆ. ಸಾತ್ತ್ವಿಕ ಸೃಷ್ಟಿಯಲ್ಲಿ ದೇವತೆಗಳು ಉದ್ಭವಿಸಿದರು. ಮನಸ್ಸು, ಬುದ್ಧಿ, ಇಂದ್ರಿಯಗಳು ರಾಜಸ ಸೃಷ್ಟಿಯ ವಿಭಾಗಕ್ಕೆ ಸೇರುತ್ತವೆ. ಪಂಚ ಭೂತಾತ್ಮಕವಾದ ಶರೀರ, ಸ್ಥಾವರ-ಜಂಗಮ ಪ್ರಪಂಚವು ತಾಮಸ ಸೃಷ್ಟಿಗಳೆನಿಸಿಕೊಳ್ಳುತ್ತವೆ.

ಬೌದ್ಧ, ಜೈನ, ಸಾಂಖ್ಯ ಮುಂತಾದ ದರ್ಶನಗಳಲ್ಲಿಯೂ ಸೃಷ್ಟಿಯ ಬಗ್ಗೆ ಅನ್ಯಾನ್ಯ ಪರಿಕಲ್ಪನೆಗಳಿವೆ. ಸಾಂಖ್ಯ ದಾರ್ಶನಿಕರು ಹೇಳುವಂತೆ ಅವ್ಯಕ್ತವೇ ಸೃಷ್ಟಿಯ ಮೂಲ. ಅವ್ಯಕ್ತದಿಂದ ಮಹತ್ತತ್ತ್ವ ಉದ್ಭವಿಸಿತು. ಅದೇ ಮುಂದಕ್ಕೆ ಅಹಂಕಾರ ತತ್ತ್ವವಾಯಿತು. ಸೃಷ್ಟಿಯ ಬಳಿಕ ಸಂಭವಿಸುವ ಇಷ್ಟಾನಿಷ್ಟಗಳಿಂದಾಗಿ ರಾಗದ್ವೇಷಾದಿಗಳಂಥ ಒತ್ತಡಗಳು ಉದ್ಭವಿಸುತ್ತವೆ. ಇದು ದುಃಖಕ್ಕೆ ಕಾರಣವಾಗುತ್ತದೆ ಎಂಬುದು ಆಧ್ಯಾತ್ಮಿಕವಾದ ಒಂದು ವಿವರಣೆ.

ನಿಜವಾಗಿ ನಮ್ಮ ಆರ್ಷೇಯ ಜ್ಞಾನ ಪರಂಪರೆಯಲ್ಲಿ ಜಗತ್ತು ಇದೆ ಮತ್ತು ಇಲ್ಲ ಎಂಬ ಎರಡೂ ವಿಚಾರಗಳು ಪ್ರಮುಖವಾಗಿರುವಂಥವು. ವೇದಾಂತ ಅಂತಿಮವಾಗಿ ಸೃಷ್ಟಿಯ ಅಸ್ತಿತ್ವವನ್ನು ನಿರಾಕರಿಸುತ್ತದೆ. ಶಾಂಕರ, ಬೌದ್ಧ ದರ್ಶನಗಳು ಜಗತ್ತು 'ಪರಮಾರ್ಥವಾಗಿ ಇಲ್ಲ, ಅದು ಸಾಪೇಕ್ಷ' ಎಂದೇ ಪ್ರತಿಪಾದಿಸುತ್ತವೆ. ಆದರೆ, ಜೈನ, ಶೈವ, ವೈಷ್ಣವ, ಶ್ರೀವೈಷ್ಣವ,

– ನಾಲ್ಕನೇ ಪುಟಕ್ಕೆ

# 'ಹಲೊ' ಪತ್ರಿಕೋದ್ಯಮ

ಮಾಧ್ಯಮ ಕ್ಷೇತ್ರದಲ್ಲಿ ಇತ್ತೀಚೆಗಿನ ಹೊಸ ವಿಸ್ತರಣೆ : ಮೊಬೈಲ್ ಪತ್ರಿಕೋದ್ಯಮ

**ಹೆ**ಸರು **ಶುಭ್ರಾಂಶು ಚೌಧುರಿ**. ಮೊಬೈಲ್ ಫೋನ್ ಮೂಲಕವೂ ಪತ್ರಿಕೋದ್ಯಮ ಸೇವೆ ಸಾಧ್ಯ ಎಂಬುದನ್ನು ಅಂತಾರಾಷ್ಟ್ರೀಯ ಮಟ್ಟದಲ್ಲಿ ತೋರಿಸಿಕೊಟ್ಟಿರುವ ಸಾಹಸಿ ಪತ್ರಕರ್ತ. ಮೊಬೈಲ್ ವರದಿ ಯೋಜನೆಯ ಫಲಶ್ರುತಿಯಾಗಿ **ಸಿ.ಜಿ. ನೆಟ್‌ಸ್ವರ** ಎಂಬ ಧ್ವನಿ-ವರದಿ-ವೇದಿಕೆಯನ್ನು ಸ್ಥಾಪಿಸಿದ, ಜನಪರ ಪತ್ರಿಕೋದ್ಯಮದ ಯಶಸ್ವೀ ಕನಸುಗಾರ.

ಮಾವೋ ಉಗ್ರಗಾಮಿಗಳ ಹಿಂಸಾಚಟುವಟಿಕೆಗಳ ಕೇಂದ್ರವಾಗಿ ಮಾರ್ಪಟ್ಟಿದ್ದ ಛತ್ತೀಸ್‌ಗಢದಿಂದ ಬಂದವರು ಚೌಧುರಿ. ಬಿಬಿಸಿಯಲ್ಲಿ ಪತ್ರಕರ್ತನಾಗಿ ಕರ್ತವ್ಯ ನಿರ್ವಹಣೆಗೆ ಮುಂದಾದಾಗ ಅವರಿಗೆದುರಾದದ್ದು ವರದಿಗಾರಿಕೆಯ ಮಾಧ್ಯಮ ಯಾವುದು ಎಂಬ ಪ್ರಶ್ನೆ.

ಮಾವೋ ಉಗ್ರರಿಗೆ ಭೀಮಬಲ ಬಂದುದು ಛತ್ತೀಸ್‌ಗಢದಲ್ಲಿ ನಾಗರಿಕ ಹಕ್ಕುಗಳಿಂದ ವಂಚಿತರಾಗಿರುವ ಆದಿವಾಸಿ ಜನರ ಅಸಹಾಯಕತೆಯಿಂದ. ಭಾರತದ ಉದ್ದಕ್ಕೂ ಬೇರೆ ಬೇರೆ ಪ್ರದೇಶಗಳಲ್ಲಿ ಹರಡಿಹೋಗಿರುವ 10 ಕೋಟಿಗೂ ಅಧಿಕ ಬುಡಕಟ್ಟುಗಳ ಜನ ನಿತ್ಯ ಬದುಕುತ್ತಿರುವುದು ಬಡತನ ತಾಂಡವವಾಡುತ್ತಿರುವ ಗ್ರಾಮೀಣ ಪರಿಸರದಲ್ಲಿ. ಅವರ ದುರವಸ್ಥೆಗೆ ಅಂತ್ಯವಿಲ್ಲ. ಅದನ್ನು ಹೇಳಿಕೊಳ್ಳೋಣವೆಂದರೆ ತಕ್ಕ ಭಾಷೆ ಅವರಲ್ಲಿಲ್ಲ. ಅವರದು ಸುದ್ದಿ ಮಾಧ್ಯಮಗಳ ಭಾಷೆಯಲ್ಲ. ಹೀಗಾಗಿ ಅವರ ದುರವಸ್ಥೆ ರಾಷ್ಟ್ರೀಯ ಸುದ್ದಿ ಮಾಧ್ಯಮಗಳ ಕಿವಿಗೆ ಬೀಳಲೇ ಇಲ್ಲ.

ಶುಭ್ರಾಂಶು ಹೇಳುತ್ತಾರೆ – "ಈ ವಿವಿಧ ಆದಿವಾಸಿ ಸಮುದಾಯಗಳಿಂದ ಒಬ್ಬನೇ ಒಬ್ಬ ಪತ್ರಕರ್ತ ಹುಟ್ಟಿ ಬಂದಿಲ್ಲ. ಈ ಮಂದಿ ಅಕ್ಷರಶಃ ಸಮಾಜದ ಮುಖ್ಯ ವಾಹಿನಿಯಿಂದ ಬೇರ್ಪಟ್ಟು ಬದುಕುತ್ತಿರುವವರು. ಒಂದೆಡೆ ಓದುವವರು ಬರೆಯುವವರು ಹಾಗೂ ಮಾಧ್ಯಮಗಳ ಮಾಲೀಕರು. ಇನ್ನೊಂದೆಡೆ ಈ ಬಡಪಾಯಿಗಳು. ಹೌದು. ಪತ್ರಿಕೋದ್ಯಮ ಸಂಪೂರ್ಣವಾಗಿ ಏಕಮುಖಿಯಾಗಿದೆ."





ಈ ಬುಡಕಟ್ಟು ಜನರಿಗೆ ಸುದ್ದಿ ಮಾಧ್ಯಮಗಳಲ್ಲಿ ತಮ್ಮ ದನಿಗೆ ಬಾಯಿಕೊಡುವ ಅವಕಾಶವಿಲ್ಲ. ಅಷ್ಟೇ ಅಲ್ಲ, ಒಂದು ಬಳಕೆದಾರ ಅಥವಾ ಗ್ರಾಹಕ ಸಮುದಾಯವಾಗಿಯೂ ಈ ಮಂದಿಗೆ ಯಾವುದೇ ಹಕ್ಕಿನ ಪ್ರತಿಪಾದನೆಗೂ ಅವಕಾಶವಿಲ್ಲ. ಇವರುಗಳ ಸ್ಥಿತಿಯನ್ನು ಹತ್ತಿರದಿಂದ ಅವಲೋಕಿಸಿದಾಗ ಚೌಧುರಿಯವರ ಕಣ್ಣಿಗೆ ಹೊಡೆದು ತೋರಿದ ಸತ್ಯ ಇದು. ಅವರಿಗೆ ಕಾಣಿಸಿದ್ದು ಆದಿವಾಸಿಗಳ ಬದುಕಿನ ಪಥದಲ್ಲಿ ಅನೇಕ ವಿಧದ ತಡೆಗಟ್ಟೆಗಳು. ಇವರುಗಳಲ್ಲಿ ಅನೇಕರಿಗೆ ಅಕ್ಷರಜ್ಞಾನ ಇಲ್ಲ. ಓದು, ಬರಹಕ್ಕೆ ಅವಕಾಶ ಬಿಡಿ, ಅವರು ವಾಸಿಸುವುದು ಕೂಡ ಎಲ್ಲೋ ದೂರದ ಇತರರ ಪಾಲಿಗೆ ಅಗಮ್ಯವಾಗಿರುವ ಊರುಗಳಲ್ಲಿ, ಪ್ರಯಾಣಯೋಗ್ಯವಾದ ಮಾರ್ಗಗಳೇ ಇರದ ಹಳ್ಳಿಗಾಡುಗಳಲ್ಲಿ, ವಿದ್ಯುತ್ತೆಂದರೇನೆಂದು ಅರಿಯದ ಕತ್ತಲಕೂಪಗಳಲ್ಲಿ. ಇಂಥ ಒಂದೊಂದು ಹಳ್ಳಿಗಳನ್ನು ನೀವು ತಲುಪಬೇಕಿದ್ದರೆ ಕನಿಷ್ಠ ಐದಾದರೂ ಹೊಳೆ-ಹಳ್ಳಗಳನ್ನು ದಾಟಬೇಕು. ಇಲ್ಲವೇ ನಾಲ್ಕೈದು ಬೆಟ್ಟಗಳನ್ನಾದರೂ ಏರಿ ಇಳಿಯಬೇಕು. ಇಂಥ ಹಳ್ಳಿಗಳಲ್ಲಿ ಬದುಕುವವರಿಗೆ ಇರುವ ಒಂದೇ ಒಂದು ಸಂಪರ್ಕವೆಂದರೆ ಅವರವರ ಪತ್ನಿ ಅಥವಾ ಪತಿ; ಅಥವಾ ಸಂತೆಗೆಂದು ಹೋದಾಗ ಕಾಣಸಿಗುವ ನೆರೆಯೂರ ಮಂದಿ. ಅಲ್ಲಿ ಒಂದೇ ಒಂದು ರೇಡಿಯೋ ಇಲ್ಲ. ಟಿ.ವಿ. ಇಲ್ಲ. ಬುಡಕಟ್ಟು ಸಮುದಾಯಗಳ ಭಾಷೆ ಬಳಸುವ ಪತ್ರಿಕೆ-ಮ್ಯಾಗಸಿನ್‌ಗಳಂತೂ ಇಲ್ಲವೇ ಇಲ್ಲ.

ಈ ಗ್ರಾಮೀಣ ಬಡಪಾಯಿಗಳು ಹೀಗೆ ಸಮಾಜದ ಮುಖ್ಯವಾಹಿನಿಯಿಂದ ಪ್ರತ್ಯೇಕಿಸಲ್ಪಟ್ಟ ಸ್ಥಿತಿಯಲ್ಲಿರುವುದಕ್ಕೂ, ಛತ್ತೀಸ್‌ಗಢದಲ್ಲಿ ಮಾವೋ ಉಗ್ರರು ಮೆರೆಯುತ್ತಿರುವ ಹಿಂಸಾಕೃತ್ಯಗಳಿಗೂ ಸಂಬಂಧವಿದೆ ಎಂಬುದನ್ನು ಬಿಬಿಸಿಯ ಚೌಧುರಿ ಬಹುಬೇಗನೆ ಅರ್ಥಮಾಡಿಕೊಂಡರು. "ನಮ್ಮ ಧ್ವನಿಗೆ ಬೆಲೆಯೇ ಇಲ್ಲವೆಂದಾಗ ಏನಾಗುತ್ತದೆ? ಅದನ್ನು ಲೋಕಕ್ಕೆ ಕೇಳಿಸಬಲ್ಲ ಇನ್ನೊಂದು ಅಭಿವ್ಯಕ್ತಿ ವೇದಿಕೆಯನ್ನು ಆಯ್ದುಕೊಳ್ಳುತ್ತೇವೆ. ಛತ್ತೀಸ್‌ಗಢದಲ್ಲಿ ಆದುದು ಇದೇ. ಈ ಹತಾಶ ಅಭಿವ್ಯಕ್ತಿ ಇಲ್ಲಿ ಮಾವೋವಾದಿ ಸಿದ್ಧಾಂತವಾಗಿ ಪ್ರಕಟಗೊಳ್ಳುವಂತಾಯಿತು!"

ಇಂಥ ಹತಾಶ ಧ್ವನಿಗೆ ಧ್ವನಿಯಾಗುವುದು ಹೇಗೆ? ಇದನ್ನೆಲ್ಲ ಅಕ್ಷರ ಗಂಧವಿಲ್ಲದ ಜನರ ಲೋಕಕ್ಕೆ ವರದಿ ಮಾಡುವುದು ಹೇಗೆ? ಎಂದೆಲ್ಲ ಚಿಂತಿಸಿದ ಶುಭ್ರಾಂಶು ಚೌಧುರಿಯವರಿಗೆ ಹೊಳೆದ ಉಪಾಯ ಒಂದೇ:

## ಮೊಬೈಲ್ ವರದಿಗಾರಿಕೆ!

ಅವರ ಈ ಯೋಜನೆಗೆ ಸಾಥ್ ನೀಡಿದ್ದು ಪತ್ರಕರ್ತರ ಅಂತಾರಾಷ್ಟ್ರೀಯ ಕೇಂದ್ರ. (ಇಂಟರ್‌ನ್ಯಾಶನಲ್ ಸೆಂಟರ್ ಫಾರ್ ಜರ್ನಲಿಸ್ಟ್).

ಇದೇನಿದು ಮೊಬೈಲ್ ವರದಿಗಾರಿಕೆ? ಇದರ ಹಿನ್ನೆಲೆ ಮುನ್ನೆಲೆಗಳನ್ನು ಚೌಧುರಿಯವರ ಬಾಯಿಂದಲೇ ಕೇಳಿ–

"ಭಾರತದಲ್ಲಿಂದು ಮೊಬೈಲ್ ಫೋನ್ ಅತ್ಯಂತ ಜನಪ್ರಿಯ ಸಾಧನ. ರಾಷ್ಟ್ರೀಯ ಮಟ್ಟದಲ್ಲಿ ಇದರ ಬಳಕೆಗೆ ಹೋಲಿಸಿದಲ್ಲಿ ಗ್ರಾಮಾಂತರ ಮಟ್ಟದಲ್ಲಿ ಕೇವಲ ಅರ್ಧಕ್ಕಿಂತಲೂ ಕಡಿಮೆ (ಶೇ. 36) ಎಂಬುದು ನಿಜವಾದರೂ ಎಷ್ಟೇ ಮೂಲೆಯಲ್ಲಿರುವ ಹಳ್ಳಿಗಳಲ್ಲೂ ಸಂಚಾರಿ ದೂರವಾಣಿ ಬಹು ಜನಪ್ರಿಯವಾಗಿದೆ. ಛತ್ತೀಸ್‌ಗಢದ ಹಳ್ಳಿಗಳ ಮಂದಿಗೆ ಓದುಬರಹ ಸಾಧ್ಯವಿಲ್ಲವಾದ್ದರಿಂದ ಸುದ್ದಿವಾಹಕವಾಗಿ ಮೊಬೈಲ್ ಒಂದು ನಿಜಕ್ಕೂ ಹೆಚ್ಚು ವೆಚ್ಚ ತಗಲದ ವಾರ್ತಾವಾಹಕ ಸಾಧನ ಎಂಬುದನ್ನು ನಾವು ಅರ್ಥಮಾಡಿಕೊಂಡೆವು. ಕಾರಣ, ಧ್ವನಿರೂಪದಲ್ಲಿ



ಶುಭ್ರಾಂಶು ಚೌಧುರಿ

ಸುದ್ದಿ ವಿತರಿಸುವ ನಮ್ಮ ಪ್ರಯೋಗ ಮೊದಲು ಆರಂಭವಾದುದು ಇಂಟರ್‌ನೆಟ್ ಹಾಗೂ ಕೆಲ ಸಾಮುದಾಯಿಕ ರೇಡಿಯೋ ಕೇಂದ್ರಗಳನ್ನು ಬಳಸಿಕೊಂಡು. ಆದರೆ, ಇದರಲ್ಲಿ ನಾವು ಸಫಲರಾಗಲಿಲ್ಲ. ಆಗ ನಾವು ಹೊರಳಿದ್ದು ಮೊಬೈಲ್‌ಗಳತ್ತ. ಭಾರತದಲ್ಲಿ ಅವುಗಳ ಪ್ರಭಾವ ಶೇ. 74ರಷ್ಟಿದೆ. 2004-05ರಲ್ಲಿ ಮೊಬೈಲ್ ಫೋನ್‌ಗಳ ಬಳಕೆಗೆ ನಾವು ಹೊರಳಿಕೊಂಡಾಗ ಭಾರತದಲ್ಲಿ ಅವು ಬಹು ಅಪರೂಪವೇ ಆಗಿದ್ದವು. ಆದರೆ ಇಂದು ಮೊಬೈಲ್ ಬಳಕೆ ವಿಸ್ಮಯ ಹುಟ್ಟಿಸುವಷ್ಟು ಹೆಚ್ಚಿದೆ".

ಈ ಪ್ರಯೋಗದ ಫಲಶ್ರುತಿಯೇ **'ಸಿ.ಜಿ. ನೆಟ್ ಸ್ವರ'** (ಅಥವಾ ಸ್ಥೂಲವಾಗಿ ಹೇಳುವುದಾದರೆ, *'ವಾಯ್ಸ್ ಆಫ್ ಛತೀಸ್‌ಗಢ್' – ಛತ್ತೀಸ್‌ಗಢದ ಧ್ವನಿ!*). ಟಿವಿ ಅಥವಾ ಕಂಪ್ಯೂಟರ್‌ನಂಥ ಇತರ ದೃಶ್ಯ ಸಾಧನಗಳಂತಲ್ಲದೆ, ಇದೊಂದು ಧ್ವನಿ ಪ್ರಸರಣದ ಬಲದಿಂದಲೇ ನಡೆಯುತ್ತಿರುವ ವರದಿಗಾರಿಕಾ ಸಂಸ್ಥೆ. ಈ ಮಾಧ್ಯಮದ ಮೂಲಕ, ಮೊಬೈಲ್ ಫೋನನ್ನು ಹೊಂದಿರುವ ಯಾವನೇ ವ್ಯಕ್ತಿ ಮಾನವಾಸಕ್ತಿಯ ವರದಿಗಳನ್ನು ದಾಖಲಿಸಬಹುದು ಅಥವಾ ಆಲಿಸಬಹುದು. ಇದನ್ನು ಬಳಸುವ ವಿಧಾನ ತುಂಬಾ ಸರಳ. ಬಳಕೆದಾರರು ತಮ್ಮ ಮೊಬೈಲ್‌ನಲ್ಲಿ 'ನೆಟ್ ಸ್ವರ' ಸಂಸ್ಥೆಯ ಅಧಿಕೃತ ಸಂಖ್ಯೆ (+91-80-41137280)ಯನ್ನು ಡಯಲ್ ಮಾಡಿದ ಬಳಿಕ '1' ಅಂಕೆಯನ್ನು ಅದುಮಿ ತಾವು ನೀಡಲಿಚ್ಛಿಸುವ ವರದಿಯನ್ನು ನಮ್ಮದೇ ಸ್ವರದಲ್ಲಿ ದಾಖಲಿಸಬಹುದು. '2' ಅಂಕೆಯನ್ನು ಒತ್ತಿದರೆ, ಈಗಾಗಲೇ ಬೇರೆಯವರು ದಾಖಲಿಸಿರುವ ವರದಿಗಳನ್ನು ಹಾಗೂ ಬರಹಗಳನ್ನು ಆಲಿಸಬಹುದು. ಯಾವುದೋ ಹಳ್ಳಿ ಮೂಲೆಯಲ್ಲಿ ನಿಂತು ನೀವು ನೀಡುವ ವರದಿಯನ್ನು ವಾರ್ತಾ ಸೇವೆಯಲ್ಲಿ ಲಭ್ಯವಾಗಿಸುವುದಕ್ಕೆ ಮುನ್ನ ಅದನ್ನು 'ಸಿ.ಜಿ. ನೆಟ್ ಸ್ವರ'ದ ಪರಿಶೀಲಕರ ತಂಡ ಸೂಕ್ತವಾಗಿ ಸಂಸ್ಕರಿಸಿ, ಸಂಪಾದಿಸಿಕೊಡುತ್ತದೆ.

– ನಾಲ್ಕನೇ ಪುಟಕ್ಕೆ

**ಜಯರಾಮ ಕಾರಂತ**

ಪತನ ಭೀತಿಯಲಿ ನೀ । ಪಥವ ಧಿಕ್ಕರಿಸಿದರೆ ।
ಪಥದ ಕಥೆ ನಡೆಯದೇನು?॥



ಇನ್ನೊಂದು ಬಗೆಯಲ್ಲು । ಅನ್ನಬಹುದೇ ಇದನು ।
ಅನ್ನುವುದೆ ಕಲೆಯ ಹವಣು ॥



ಬೆಳಕು ಹಂಚಿದರಾರೊ । ಬೆಳಗಿಕೊಂಡವರಾರೊ ।
ತಳಮಳಿಸಲಿಲ್ಲ ಹಣತೆ ॥

–ನವನೀತ